ಪ್ರಬಂಧ



ಲಲಿತಾ ಕೆ. ಹೊಸಪ್ಯಾಟಿ



# ಮಾಯದಂತ ಮಳೆ

'ಮಾಯದಂತ ಮಳೆ ಬಂತಣ್ಣ ಮದಗಾದ ಕೆರೆಗೆ...' ಜನಪದ ಕವಿ ಎಂದಂತೆ ಊರ ಕೆರೆಗೆ ಮಳೆ. ಒಡಲೊಳಗೆ ಹೊಳೆ. ಹನಿ ಒಡೆಯುವುದು ಮೋಡದೊಳಗಾದರೂ ಕಂಪನ ಮಾತ್ರ ಭಾವದೊಳಗೆ. ಈ ಜೀವದೆಳೆ ಮಳೆ ಸುರಿಸುವ ತುಂತುರು, ಬರೀ ನೆಲವನ್ನು ಮಾತ್ರ ಆವರಿಸಿಲ್ಲ. ಎದೆಯನ್ನೂ ತೋಯಿಸಿದೆ. ಹೊಯ್ದು ಹುಯಿಲೆಬ್ಬಿಸಿ ನದಿಯಾಗಿ ಹರಿವ ಶಾಲ್ಮಲೆ. ನನ್ನೊಳಗೂ ಹರಿದಿಲ್ಲವೆಂದು ಹೇಗೆ ಹೇಳಲಿ... ನೆನೆಸಿಕೊಂಡೆ ಬರೆಯಲು ಕುಳಿತಿದ್ದೇನೆ. ನೆನಪು ಒದ್ದೆ ಮಾಡಿದೆ. ಬಿಸಿಸುಯ್ಯಿಸಿದೆ. ತಬ್ಬಿದೆ. ಜೋಕಾಲಿ ಜೀಕಿದೆ. ಪ್ರವಾಹದ ರಭಸದಲ್ಲಿ ದಬ್ಬಿಕೊಂಡು ಹೋಗಿದೆ. ತಾರಸಿಯ ಮೇಲೆ ಸದ್ದೂ ಮಾಡಿದೆ. ಅಂಗಳದಲ್ಲಿ ಆಲಿಕಲ್ಲು  ಸುರಿಸಿದೆ. ಸೋರಿ ಒಳಹೊರಗನ್ನೂ ತೋಯಿಸಿದೆ.

ಮಳೆ ಸ್ಪರ್ಶವೆಂದರೇನೇ ಪುಳಕ. ಎಲ್ಲೆಲ್ಲಿ ಎಂದು ಕೇಳಬೇಡಿ. ಕೆಲವೊಮ್ಮೆ ಮಳೆ ದೆಸೆಯಿಂದ ಕಲ್ಲು ಕರಗುವುದುಂಟು. ಕಲ್ಲರಳಿ ಹೂವಾದಂತೆ. ಪ್ರೀತಿಯಿಂದ ಎದೆ ಮೇಲೆ ಹನಿಸುವ ರಾಶಿ ಮುತ್ತುಗಳು. ಮುತ್ತಿನ ಸಹಚರವಿದ್ದರೆ ಮಾತ್ರ ಕಚಗುಳಿ. ಇಲ್ಲದಿರೆ ಎಲ್ಲ ಒಣಕುಳಿ. ಮಳೆ ಸಿರಿಯೊಂದಿದ್ದರೆ ಎಲ್ಲಾ ಐಸಿರಿಯೂ ಎದುರಿಗೆ. ಹಗಲೋ, ಇರುಳೋ ಮಳೆ ಬಂದರೆ ಒಣ ಮಣ್ಣಿಗೂ ಹೂವ್ವ ಘಮ. ಎಲ್ಲೆಲ್ಲೂ ಪರಿಮಳ. ನೆಲವನ್ನು ಮನವನ್ನು ಆವರಿಸುವ ಮಳೆ ನನ್ನನ್ನು ಮೀಯಿಸಿಲ್ಲ ಎಂದು ಹೇಗೆ ಹೇಳಲಿ. ಎಲ್ಲೋ ಮಳೆಯಾಗಿದೆ ಎಂದರೆ ಇನ್ನೆಲ್ಲೋ ಒದ್ದೆ.

ಮಳೆಗೂ ಮಹಾಭಾರತಕ್ಕೂ ನಂಟಿದೆ. ಶ್ವೇತಕಿಯು ಯಜ್ಞಕ್ಕೆ ಸುರಿದ ತುಪ್ಪವನ್ನು ನುಂಗಿದ ಅಗ್ನಿಗೆ ಅಜೀರ್ಣ. ಉದರ ನಿಮಿತ್ತದ ನೋವದು. ಇಡೀ ಖಾಂಡವ